2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿ.ಸಿ ನಂಬ್ರ: **543/2017**

ಚಾಸಾ-**13** ಫ್ರಾಸಾ-**9**

ಸಾಕ್ಷಿದಾರರ ಹೆಸರು : ಶ್ರೀ. ರಾಘವ

ತಂದೆಯ ಹೆಸರು : ದಿ. ಸೀತಾರಾಮ ಎಸ್ ಪಡಿಲ್

ಪ್ರಾಯ : 61 ವರ್ಷ

ಉದ್ಯೋಗ : ನಿವೃತ್ತ ಪಿ.ಐ.

ವಾಸ : ಮಂಗಳೂರು

ದಿನಾಂಕ: **23-01-2025** ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಜೂನ್-2016 ರಿಂದ ಸೆಪ್ಟೆಂಬರ್-2017 ರವರೆಗೆ ಬೈಂದೂರು ವೃತ್ತದ ವೃತ್ತ ನಿರೀಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16-07-2016 ರಂದು ಈ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ದಿ: 08-12-2016 ರಂದು ಈ ಪ್ರಕರಣದ ಕಡತಗಳನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ದೋಷಾರೋಪಣೆಯನ್ನು ಸಲ್ಲಿಸಿರುತ್ತೇನೆ. ಚಾಸಾ-12 ರವರಿಂದ ಕಡತವನ್ನು ಪಡೆಯುವಾಗ ಎಫ್ ಐ ಆರ್, ಸಾಕ್ಷಿದಾರರಾದ ಚಾಸಾ-2 ರಿಂದ ಚಾಸಾ-4 ರವರ ಹೇಳಿಕೆಗಳು, ಬಂದೋಬಸ್ತ ಸ್ಕೀಮನ ಪ್ರತಿ, ರಹದಾರಿ, ಘಟನಾ ಸ್ಥಳದ ಮಹಜರು, ಸ್ವತ್ತು ಸ್ವಾಧೀನತಾ ಮಹಜರು, ಶ್ರೀ. ಬ್ರಹ್ಮಲಿಂಗೇಶ್ವರ ದೇವಸ್ಥಾನದಿಂದ ಬಂದೋಬಸ್ತಗಾಗಿ ನೀಡಲಾದ ಕೋರಿಕೆ ಪತ್ರ, ದಸ್ತಗಿರಿ ಮಹಜರು, ವಾಹನ ಬಿಡುಗಡೆ ಮಾಡಿದ ಪತ್ರ, ಉಪವಿಭಾಗಾಧಿಕಾರಿಗಳು ನೀಡಿದ ಮೆಮೊ, ತಕ್ಷೀರು ಸ್ಥಳದ ಮತ್ತು ವಾಹನ ಪೋಟೋಗಳನ್ನು ಮತ್ತು ಕರಡು ನಕ್ಷೆ, ವಾಹನದ ಮಾಲೀಕರಿಗೆ ನೀಡಲಾದ ನೋಟಿಸುಗನ್ನು ಪಡೆದುಕೊಂಡಿರುತ್ತೇನೆ.

ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಹೆಚ್ ಎ ಎಸ್ ರವರಿಂದ:

ಈ ಪ್ರಕರಣದಲ್ಲಿ ನಾನು ಕಡತವನ್ನು ಪರೀಶೀಲಿಸಿ ದೋಷಾರೋಪಣೆಯನ್ನು ಸಲ್ಲಿಸಿರುವುದನ್ನು ಹೊರತುಪಡಿಸಿ ಬೇರೆ ತನಿಖೆ ಮಾಡಿರುವುದಿಲ್ಲ. ನನ್ನ ಅಧೀನ ಅಧಿಕಾರಿಗಳು ಸರಿಯಾಗಿ ತನಿಖೆ ಮಾಡದೇ ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ಸುಳ್ಳು ದೋಷಾರೋಪಣೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದೂರುದಾರರು ಪೋಲಿಸ ಅಧಿಕಾರಿಯಾಗಿರುವುದರಿಂದ, ಅವರಿಗೆ ಸಹಾಯ ಮಾಡಲು ಸುಳ್ಳು ದೋಷಾರೋಪಣೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.